# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 52 ಫ್ರಾ.ಸಾ. : 41**

| | | |
|---|---|---|
| ಸಾಕ್ಷಿಯ ಹೆಸರು | : | ಈರೇಶ ಕಬ್ಬಿನ್ |
| ತಂದೆಯ ಹೆಸರು | : | ಮಡಿವಾಳಪ್ಪ ಕಬ್ಬಿನ್ |
| ವಯಸ್ಸು | : | 51 ವರ್ಷ |
| ಕೆಲಸ | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,<br>ಕಿರವತ್ತಿ ಟಿಂಬರ್ ಡಿಪೋ |
| ವಾಸ | : | ಯಲ್ಲಾಪುರ. |

**ದಿನಾಂಕಃ 17-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. 2017 ರಿಂದ 2020ರವರೆಗೆ ನಾನು ಜೋಯಿಡಾದ ಅಣಶಿಯಲ್ಲಿ ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಅಣಶಿ, ಉಳವಿ, ಕದ್ರಾ ಮುಂತಾದ ಅರಣ್ಯ ಪ್ರದೇಶವು ನಮ್ಮ ವ್ಯಾಪ್ತಿಯಲ್ಲಿ ಬರುತ್ತಿತ್ತು.

2. ಚಾಸಾ-53 ರವೀಂದ್ರ ನನಗೆ ಗೊತ್ತು. ಅವರು ನಮ್ಮ ಅರಣ್ಯ ಇಲಾಖೆಯ ಕಾವಲುಗಾರರು. ಚಾಸಾ-22 ಅರಣ್ಯ ರಕ್ಷಕ ಆಗಿ ಕೆಲಸ ಮಾಡುತ್ತಿದ್ದರು. ದಿನಾಂಕಃ 24.10.2018 ರಂದು ಈ ಪ್ರಕರಣದ ತನಿಖಾಧಿಕಾರಿಯು ಕೋರಿಕೆ ಪತ್ರ ನೀಡಿದ್ದು, ಅದರಲ್ಲಿ ದಿನಾಂಕಃ 16.10.2018 ರಂದು ಮಾರುತಿ ಸುಜುಕಿ ಜೆನ್ ನೊಂದಣಿ ಸಂಖ್ಯೆ ಎಮ್ ಹೆಚ್ - 04/ಬಿ ಕೆ-0726 ವಾಹನವು ಕದ್ರಾ ಅರಣ್ಯ ಚೆಕ್ ಪೋಸ್ಟ ಮೂಲಕ ಜೋಯಿಡಾ ಮಾರ್ಗವಾಗಿ ಹೋಗಿರುವ ಬಗ್ಗೆ, ನಮ್ಮ ಚೆಕ್ ಪೋಸ್ಟನಲ್ಲಿ ನಿರ್ವಹಿಸುತ್ತಿರುವ ರಜಿಸ್ಟರನ ದೃಡೀಕೃತ ಪ್ರತಿಯನ್ನು ಹಾಗೂ ಸದರಿ ದಿನದಂದು ಸದರಿ ಕಾರು ಚೆಕ್ ಪೋಸ್ಟ ಮೂಲಕ ಹಾದು ಹೋದ ಸಮಯದಲ್ಲಿ ಚೆಕ್ ಪೋಸ್ಟನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿ ಮತ್ತು ವಾಹನ ತಪಾಸಣೆ ನಡೆಸಿದ ಸಿಬ್ಬಂದಿಯ ವಿವರ ನೀಡುವಂತೆ ಕೋರಿಕೊಂಡಿರುತ್ತಾರೆ. ಅದರಂತೆ ನಾನು

ನಮ್ಮ ಚೆಕ್ ಪೋಸ್ಟನಲ್ಲಿ ಇದ್ದಂತಹ ರಜಿಸ್ಟರನ್ನು ಪರಿಶೀಲಿಸಿ ಸದರಿ ದಿನದಂದು ಚೆಕ್ ಪೋಸ್ಟ ಮೂಲಕ ಹಾದು ಹೋದ ವಾಹನಗಳ ವಿವರ ಹಾಗೂ ಚೆಕ್ ಪೋಸ್ಟನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ವಿವರಗಳನ್ನು ದೃಡೀಕರಿಸಿ ನೀಡಿರುತ್ತೇನೆ. ನಾನು ನೀಡಿದ ದಾಖಲೆಗಳ ಪ್ರಕಾರ ಸದರಿ ಕಾರು ಆ ದಿನ ಮದ್ಯಾಹ್ನ 3.00 ಗಂಟೆ 21 ನಿಮಿಷದಲ್ಲಿ ಚೆಕ್ ಪೋಸ್ಟ ಮೂಲಕ ಹಾದು ಹೋಗಿರುವುದು ಕಂಡು ಬಂದಿರುತ್ತದೆ. ಸಾಕ್ಷಿಯು ತಾನು ನೀಡಿದ ದೃಡೀಕೃತ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–54 ಎಂದು ಗುರುತಿಸಲಾಗಿದ್ದು, ಸದರಿ ಕಾರಿಗೆ ಸಂಬಂಧಿಸಿದಂತೆ ನಮೂದಾಗಿರುವ ವಿವರವನ್ನು ನಿಪಿ–54(ಎ) ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–54(ಬಿ) ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ